ದಿನಾಂಕಃ 16-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ವಕೀಲರಿಂದ,

1) ನಾನು 8 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಗೃಹಿಣಿ ಆಗಿರುತ್ತೇನೆ. ನನ್ನ ಗಂಡ ದರ್ಜಿ ಕೆಲಸ ಮಾಡುತ್ತಾರೆ. ನಿಶಾನೆ ಪಿ-01 ಕರಾರು ಪತ್ರದಲ್ಲಿರುವ ಸಹಿ ನನ್ನದು ಆಗಿರುವುದಿಲ್ಲ. ನಮ್ಮ ಕುಟುಂಬಕ್ಕೆ ದಾವಾ ಆಸ್ತಿ ಮಾತ್ರ ಇರುತ್ತದೆ. ದಾವಾ ಸ್ವತ್ತಿನ ಆಸ್ತಿ ಖಾತೆ ಸಂಖ್ಯೆ ಗೊತ್ತಿರುವುದಿಲ್ಲ. ನಾನು ಈಗ ಮೈಸೂರಿನಲ್ಲಿ ವಾಸವಾಗಿರುತ್ತೇನೆ. ದಾವಾ ಸ್ವತ್ತಿನ ಮನೆಯಲ್ಲಿ ನನ್ನ ತಾಯಿ ವಾಸವಾಗಿರುತ್ತಾರೆ.

2) ದಿನಾಂಕ 05.08.2016 ರಂದು ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡುತ್ತೇವೆ ಎಂದು ಒಪ್ಪಿ ನೋಂದಾಯಿತ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಡಿಯಲ್ಲಿ ಮುಗಂಡ ಹಣವಾಗಿ ರೂ. 7,40,000/- ವಾದಿಯಿಂದ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಶ್ರೀನಿವಾಸ ಎಂ ಟಿ ನನ್ನ ಮೈದುನ. ನಿಶಾನೆ ಡಿ-05 ದಾಖಲೆಯನ್ನು ಶ್ರೀನಿವಾಸ ಹೆಸರಿನಲ್ಲಿ ಕೊಟ್ಟಿರುತ್ತೇವೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ-05 ದಾಖಲೆಯನ್ನು ವಾದಿಗೆ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ನೀಡಿರುತ್ತೇನೆ. ನನ್ನ ಹೆಸರಿನಲ್ಲಿ ಬ್ಯಾಂಕಿನ ಖಾತೆ ಇರುವುದಿಲ್ಲ. ನನ್ನ ಗಂಡನ ಹೆಸರಿನಲ್ಲಿ ಬ್ಯಾಂಕಿನ ಖಾತೆ ಇರುತ್ತದೆ. ವಾದಿಗೆ ನಾವು ಹಣವನ್ನು ಮರುಪಾವತಿ ಮಾಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ